**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 27.02.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು ಃ 25 ನೇ ಪ್ರತಿವಾದಿ ಪರ ವಕೀಲರಿಂದ,**

25 ನೇ ಪ್ರತಿವಾದಿ ತಮ್ಮ ಭಾಗಕ್ಕೆ ಬಂದಂತಹ ಆಸ್ತಿಗಳು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 25 ನೇ ಪ್ರತಿವಾದಿಯೂ ತಮ್ಮ ಭಾಗಕ್ಕೆ ಬಂದಂತಹ ಆಸ್ತಿಯನ್ನು 26 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಅವರಿಗೆ ಯಾವುದೇ ಅಧಿಕಾರ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಈಗಾಗಲೇ ವಿಭಾಗ ಆಗಿದ್ದರಿಂದ ಯಾವುದೇ ಭಾಗಾಂಶವನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 26 ನೇ ಪ್ರತಿವಾದಿ ಪರ ವಕೀಲರಿಂದ,**

ನಾನು ದಾವಾ ಸಲ್ಲಿಸುವ ಪೂರ್ವದಲ್ಲಿ ಭಾಗಾಂಶವನ್ನು ಬೇಕು ಎಂದು ನಾನು ಯಾರನ್ನು ಕೇಳಿರುವುದಿಲ್ಲ. ದಾವಾ ಸಲ್ಲಿಸಲು ನನಗೆ ಮಾಹಿತಿಯನ್ನು ನಮ್ಮ ವಕೀಲರು ಚೆನ್ನಬಸಪ್ಪರವರು ಕೊಟ್ಟಿರುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತ ನನ್ನ ತಾಯಿ ಮತ್ತು ಅವರ ಅಕ್ಕತಂಗಿಯರ ನಡುವೆ ಈಗಾಗಲೇ ಪಾಲು ವಿಭಾಗ ಆಗಿದೆ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಯ ಪಹಣಿಗಳು ಹನುಮವ್ವರವರ ಹೆಸರಿನಲ್ಲಿದ್ದವು. ಈ ಹಿಂದೆ ನಾನು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕೂಡ್ಲಿಗಿಯಲ್ಲಿ ಓ.ಎಸ್ ನಂ.101/2013 ನ್ನು ಪ್ರತಿವಾದಿ 25 ಮತ್ತು 26 ರವರ ವಿರುದ್ಧ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣವು ರಾಜೀಯಾಗಿರುತ್ತದೆ. 1995 ನೇ ಇಸ್ವಿಯಲ್ಲಿ ದಾವಾ ಆಸ್ತಿಯನ್ನು ನನ್ನ ತಾಯಿ ಮತ್ತು ನನ್ನ ತಾಯಿಯ ಸಹೋದರಿಯರು ಪ್ರತಿವಾದಿ 26 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡುವ ಕಾಲಕ್ಕೆ ಸದರಿ ದಾವಾ ಆಸ್ತಿಗಳ ಮೇಲೆ ಅಧಿಕಾರ ಇತ್ತು ಎಂದರೆ ಸರಿಯಲ್ಲ.

ಈಗಾಗಲೆ ನನ್ನ ತಾಯಿ ಮತ್ತು ಅವರ ಸಹೋದರಿಯರ ನಡುವೆ ಭಾಗ ಆಗಿ ಪ್ರತಿವಾದಿ 26 ರವರಿಗೆ ಮಾರಾಟ ಮಾಡಿರುವುದರಿಂದ ಸದರಿ ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 9 ನ್ನು ಪ್ರತಿವಾದಿ 26 ಖರೀದಿ ಮಾಡಿದ್ದ ಕಾರಣದಿಂದ ಅವರೇ ಸ್ವಾಧೀನಾನುಭದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**